ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 02–02–2017

## ಪತ್ರಿಕಾ ಆಮಂತ್ರಣ

1. ಆಯುಷ್ ಇಲಾಖೆ ವತಿಯಿಂದ ರಥಸಪ್ತಮಿ ಅಂಗವಾಗಿ ಯೋಗ–ಸೂರ್ಯ ನಮಸ್ಕಾರ ಪ್ರದರ್ಶನ:

   ಪಾಲ್ಗೊಳ್ಳುವವರು:

   ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

   ಕೆ.ಆರ್. ರಮೇಶ್, ಆರೋಗ್ಯ ಸಚಿವರು.

   ದಿನಾಂಕ: 03–02–2017 ಶುಕ್ರವಾರ, ಸಮಯ: ಬೆಳಿಗ್ಗೆ 6.00 ರಿಂದ 8.30 ಗಂಟೆವರೆಗೆ.
   ಸ್ಥಳ: ವಿಧಾನಸೌಧ ಬ್ಯಾಂಕ್ವೆಟ್ ಹಾಲ್ ಎದುರು, ಬೆಂಗಳೂರು

2. ಪ್ರಶಸ್ತಿ ಪ್ರದಾನ ಸಮಾರಂಭ:
   ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ.

   ಪ್ರಶಸ್ತಿ ಪತ್ರ ನೀಡುವವರು:

   ಬಸವರಾಜ ರಾಯರೆಡ್ಡಿ– ಉನ್ನತ ಶಿಕ್ಷಣ ಸಚಿವರು

   ತನ್ವೀರ್ ಸೇಠ್– ವಕ್ಫ್ , ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

   ದಿನಾಂಕ: 03–02–2017 ಶುಕ್ರವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ.
   ಸ್ಥಳ: ಗಾಜಿನ ಮನೆ, ರಾಜಭವನ, ಬೆಂಗಳೂರು – 560 001.

3. ಶ್ರೀ ದಶರಥ್ ಸಿಂಗ್ ಅವರು ಸಂಗ್ರಹಿಸಿರುವ ವಿನೂತನ ಹಾಗೂ ವೈವಿಧ್ಯಮಯವಾದ ವಸ್ತುಗಳ ಪ್ರದರ್ಶನ ವಿಸ್ಮಯ ಪ್ರಪಂಚ
   ಮುಖ್ಯ ಅತಿಥಿಗಳು:

ಆರ್. ರೋಷನ್ ಬೇಗ್, ಬೆಂಗಳೂರು ನಗರಾಭಿವೃದ್ಧಿ, ಹಜ್, ಅಲ್ಪಸಂಖ್ಯಾತರ ಅಭಿವೃದ್ಧಿ, ವಕ್ಫ್ ಸಚಿವರು.
ದಿನಾಂಕ: 03-02-2017 ಶುಕ್ರವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ.
ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಪೌಷ್ಠಿಕಾಂಶ ಕೊರತೆಯಿಂದ ದೈಹಿಕ, ಮಾನಸಿಕ ಬೆಳವಣಿಗೆ ಕುಂಠಿತ ಮುಖ್ಯ ಕಾರ್ಯದರ್ಶಿ – ಸುಭಾಷ್‌ಚಂದ್ರ ಕುಂಠಿಯಾ

ಬೆಂಗಳೂರು, ಫೆಬ್ರವರಿ 2, (ಕರ್ನಾಟಕ ವಾರ್ತೆ)

ಗರ್ಭಿಣಿ ಮಹಿಳೆಯರಲ್ಲಿ ಪೌಷ್ಠಿಕಾಂಶದ ಕೊರತೆಯಿಂದ ಹುಟ್ಟುವ ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಸರಿಯಾದ ಬೆಳವಣಿಗೆಯಾಗುವುದಿಲ್ಲ, ಇದಕ್ಕೆ ಮುಖ್ಯ ಕಾರಣ ಬಡತನ ಮತ್ತು ಸರಿಯಾದ ರೀತಿಯ ಪ್ರಚಾರ ಹಾಗೂ ನಮ್ಮ ಆಡಳಿತ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಪೌಷ್ಠಿಕಾಂಶ ಕೊರತೆಯನ್ನು ನಿರ್ವಹಣೆ ಮಾಡಲು ಹಾಕಿಕೊಂಡಿರುವ ಯೋಜನೆಗಳು ಸರಿಯಾಗಿ ನಿಗದಿತ ಫಲಾನುಭವಿಗಳಿಗೆ ತಲುಪದೇ ಇರುವುದು ಪೌಷ್ಠಿಕಾಂಶ ಕೊರತೆಗೆ ಮುಖ್ಯಕಾರಣ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್‌ಚಂದ್ರ ಕುಂಠಿಯಾ ಅವರು ತಿಳಿಸಿದರು.

ಇಂದು ಹೋಟೇಲ್ ಕ್ಯಾಪಿಟಲ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ವರ್ಲ್ಡ್ ಬ್ಯಾಂಕ್ ಸಹಭಾಗಿತ್ವದಲ್ಲಿ ಏರ್ಪಡಿಸಲಾಗಿದ್ದ ಪೌಷ್ಠಿಕಾಂಶ ಕೊರತೆಯ ನಿರ್ಮೂಲನ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ ಅವರು ಪ್ರಪಂಚದ ಆರು ದೇಶಗಳಲ್ಲಿ ಭಾರತವೂ ಸಹ ಪೌಷ್ಠಿಕಾಂಶ ಕೊರತೆಯುಳ್ಳ ದೇಶಗಳ ಪಟ್ಟಿಯಲ್ಲಿ ಸೇರುತ್ತದೆ ಎಂದರು.

ನಮ್ಮ ದೇಶದಲ್ಲಿ ಶೇ 39 ರಷ್ಟು 5 ವರ್ಷಕ್ಕಿಂತ ಒಳಪಟ್ಟ ಮಕ್ಕಳು ಪೌಷ್ಠಿಕಾಂಶ ಕೊರತೆಯಿಂದ ಬಳಲುತ್ತಿದ್ದು, ಈ ಮಕ್ಕಳಲ್ಲಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಬೆಳವಣಿಗೆ ಆಗುವುದಿಲ್ಲ. ಈ ರೀತಿಯಿಂದ ದೇಶದ ಅಭಿವೃದ್ಧಿ ಸಹ ಕುಂಠಿತವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ನಮ್ಮ ಸರ್ಕಾರಗಳು ಘೋಷಣೆ ಮಾಡುವ ಯೋಜನೆಯ ಹಣ ದುಂದು ವೆಚ್ಚವಾಗದ ರೀತಿಯಲ್ಲಿ ನಮ್ಮ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು ಫಲಾನುಭವಿಗಳಿಗೆ ಪೌಷ್ಠಿಕಾಂಶಗಳುಳ್ಳ ಆಹಾರ ಪದಾರ್ಥಗಳನ್ನು ಒದಗಿಸಬೇಕು. ನಮ್ಮಲ್ಲಿ ಅಧಿವೇಶನಗಳಲ್ಲಿ, ಪತ್ರಿಕೆಗಳಲ್ಲಿ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಚರ್ಚೆ ನಡೆಯುವುದು ಬಹಳ ಕಡಿಮೆ.

ಆದ್ದರಿಂದ ಈ ಯೋಜನೆಗಳು ಫಲಕಾರಿಯಾಗಬೇಕಾದರೆ ವ್ಯಾಪಕವಾದ ಪ್ರಚಾರದ ಅಗತ್ಯತೆ ಇದೆ ಎಂದು ನಿವೃತ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ ಅವರು ಅಭಿಪ್ರಾಯಪಟ್ಟರು.

"ಮೂರು ವರ್ಷದ ಬೆಳವಣಿಗೆ ನೂರು ವರ್ಷದವರೆಗೆ", ಗರ್ಭಿಣಿಯಾದ ಮಹಿಳೆ ಸರಿಯಾದ ರೀತಿ ಪೌಷ್ಠಿಕಾಂಶವುಳ್ಳ ಆಹಾರವನ್ನು ಸೇವನೆಮಾಡಿ ಆರೋಗ್ಯವಂತ ಮಗುವಿಗೆ ಜನ್ಮ ನೀಡಿ, ಜನಿಸಿದ ಮಗುವಿಗೂ ಸಹ ಪೌಷ್ಠಿಕಾಂಶವುಳ್ಳ ಆಹಾರವನ್ನು ನೀಡಿದಾಗ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಾದಂತಹ ಮಕ್ಕಳಿಂದ ದೇಶದ ಅಭಿವೃದ್ಧಿಯಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದಶಿ ಶ್ರೀಮತಿ ಎನ್. ನಾಗಾಂಬಿಕಾದೇವಿ ಅವರು ತಿಳಿಸಿದರು

ಈ ಕಾರ್ಯಾಗಾರದಲ್ಲಿ ರಾಷ್ಟ್ರೀಯ ಗ್ರಾಮೀಣ ಸಾಕ್ಷರತಾ ಮಿಷನ್ನಿನ ವ್ಯವಸ್ಥಾಪಕ ನಿರ್ದೇಶಕಿ ಶ್ರೀಮತಿ ಸುಷ್ಮಾ ಗೋಡಬೋಲೆ, ವರ್ಲ್ಡ್ ಬ್ಯಾಂಕಿನ ಹಿರಿಯ ಆರೋಗ್ಯ ತಜ್ಞೆ ಮೋಹಿನಿ ಕಾಕ, ಕೆಸಿಎನ್‌ಎಂ ನ್ ಸಲಹೆಗಾರರಾದ ಶ್ರೀಮತಿ ವೀಣಾ ಎಸ್.ರಾವ್, ಭಾರತ ಸರ್ಕಾರದ ಎನ್‌ಐಟಿಐನ ಸಲಹೆಗಾರ ಅಲೋಕ್ ಕುಮಾರ್, ಇತರೆ ಸಂಬಂಧಪಟ್ಟ ಇಲಾಖಾಧಿಕಾರಿಗಳು ಹಾಗೂ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್.

## ಪರೀಕ್ಷಾ ಕೇಂದ್ರಗಳ ಹೆಸರು ಗಮನಿಸಿ

ಬೆಂಗಳೂರು, ಫೆಬ್ರವರಿ 2 , (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಫೆಬ್ರವರಿ 5 ರಂದು ನಡೆಸಲಿರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಪರೀಕ್ಷೆಗೆ ಬಳ್ಳಾರಿ ಕೇಂದ್ರದಲ್ಲಿ ನೀಡಲಾದ ಪ್ರವೇಶ ಪತ್ರದಲ್ಲಿನ ಕ್ರಮ ಸಂಖ್ಯೆ 003 ರ ಉಪ ಕೇಂದ್ರ **Gurupadappa PU College,** ಎಂಬುದನ್ನು **Gurushanthappa (S.G) PU College, Sri Y. Nagashasthri Nagara, Ballary** ಮತ್ತು ಕ್ರಮ ಸಂಖ್ಯೆ 25 ರಲ್ಲಿನ **St. Joseph's Girls High School, Cowl Bajar, Ballary – 02** ಹಾಗೂ ಬೆಂಗಳೂರು ಕೇಂದ್ರದ ಕ್ರಮ ಸಂಖ್ಯೆ 077 ರಲ್ಲಿನ **RES High School** ಎಂಬುದನ್ನು **PES High School, SRS Road, Peenya, behind KEB Office, Bangalore – 58** ಎಂದು ಓದಿಕೊಂಡು ಅದರಂತೆ ಸದರಿ ಶಾಲೆಗಳಲ್ಲಿ ಪರೀಕ್ಷೆಗೆ ಹಾಜರಾಗಲು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಕನ್ನಡ ಭಾಷಾ ಪರೀಕ್ಷೆ – ಫಲಿತಾಂಶ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಫೆಬ್ರವರಿ 2 , (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಗ್ರೂಪ್-ಸಿ ತಾಂತ್ರಿಕೇತರ ಹುದ್ದೆಗಳ ನೇಮಕಾತಿಗೆ ಡಿಸೆಂಬರ್‌ನಲ್ಲಿ ನಡೆಸಲಾದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಫಲಿತಾಂಶವನ್ನು ಆಯೋಗದ ಅಂತರ್ಜಾಲ "http://kpsc.kar.nic.in/Results" ದಲ್ಲಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## "ರಸ್ತೆ ಸುರಕ್ಷತೆ" ಕುರಿತು ರಾಜ್ಯ ಮಟ್ಟದ ವ್ಯಂಗ್ಯ ಚಿತ್ರ ಸ್ಪರ್ಧೆ/ಪ್ರದರ್ಶನ

ಬೆಂಗಳೂರು, ಫೆಬ್ರವರಿ 2 , (ಕರ್ನಾಟಕ ವಾರ್ತೆ)

ರಾಜ್ಯದ ಸಾರಿಗೆ ಇಲಾಖೆ "ರಸ್ತೆ ಸುರಕ್ಷತೆ" ಕುರಿತು ರಾಜ್ಯದ ಮಟ್ಟದ ವ್ಯಂಗ್ಯ ಚಿತ್ರ ಸ್ಪರ್ಧೆ ಮತ್ತು ಪ್ರದರ್ಶನವನ್ನು ಫೆಬ್ರವರಿ 21 ರಿಂದ 23 ರವರೆಗೆ ಹಮ್ಮಿಕೊಂಡಿದ್ದು ಕಲಾವಿದರಿಂದ ವ್ಯಂಗ್ಯ ಚಿತ್ರಗಳನ್ನು ಆಹ್ವಾನಿಸಿದೆ.

ವ್ಯಂಗ್ಯ ಚಿತ್ರಕಾರರು "ರಸ್ತೆ ಸುರಕ್ಷತೆ" ಕುರಿತು ಅಪಘಾತಗಳನ್ನು ತಡೆಗಟ್ಟುವ ವಿಷಯವನ್ನು ಆಧರಿಸಿ ರಚಿಸಿದ ವ್ಯಂಗ್ಯ ಚಿತ್ರವನ್ನು ವಿ.ಆರ್.ಸಿ. ಶೇಖರ್, ಅಧ್ಯಕ್ಷರು, ಕರ್ನಾಟಕ ವ್ಯಂಗ್ಯ ಚಿತ್ರಗಾರರ ಸಂಘ (ರಿ) 13/ಬಿ, ಶೃಂಗಗಿರಿ, 5ನೇ ಕ್ರಾಸ್, ಸುಪ್ರಜಾನಗರ, ಕೋಣನಕುಂಟೆ, ಬೆಂಗಳೂರು – 560 062 ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9945434748 ಸಂಪರ್ಕಿಸಬಹುದು.

ಒಬ್ಬರು ನಾಲ್ಕು ಚಿತ್ರಗಳನ್ನು (ಕಪ್ಪು-ಬಿಳುಪು ಅಥವಾ ವರ್ಣ) ಎ-4 ಅಥವಾ ಎ-3 ಅಳತೆಯ ವ್ಯಂಗ್ಯಚಿತ್ರಗಳನ್ನು ಫೆಬ್ರವರಿ 15 ರೊಳಗಾಗಿ ಕಳುಹಿಸಿಕೊಡಬಹುದಾಗಿದೆ. ಈ ಸಂಬಂಧ ಬಹುಮಾನಕ್ಕೆ ಹಾಗೂ ಪ್ರದರ್ಶನಕ್ಕೆ ಆಯ್ಕೆ ಮಾಡಲು ತೀರ್ಪುಗಾರರ ಸಮಿತಿಯನ್ನು ರಚಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಉರ್ದು ಡಿಪ್ಲೊಮ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು, ಫೆಬ್ರವರಿ 2, (ಕರ್ನಾಟಕ ವಾರ್ತೆ)

ಕರ್ನಾಟಕ ಉರ್ದು ಅಕಾಡೆಮಿ ಹಾಗೂ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ನ್ಯಾಷನಲ್ ಕೌನ್ಸಿಲ್ ಫಾರ್ ಪ್ರೊಮೊಷನ್ ಆಫ್ ಉರ್ದು ಲಾಂಗ್ವೇಜ್, ನವದೆಹಲಿ ಇವರ ಸಹಯೋಗದಲ್ಲಿ ಉರ್ದು ಕಲಿಯಲು ಇಚ್ಚಿಸುವ ಅಭ್ಯರ್ಥಿಗಳಿಗೆ 2017-18 ನೇ ಸಾಲಿನ ಒಂದು ವರ್ಷದ ಉರ್ದು ಡಿಪ್ಲೊಮ ಕೋರ್ಸ್‌ಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ಅಭ್ಯರ್ಥಿಗಳು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಶುಲ್ಕ ರೂ 200/-ಗಳನ್ನು ನೀಡಿ ಅರ್ಜಿ ಕರ್ನಾಟಕ ಉರ್ದು ಅಕಾಡೆಮಿಯಿಂದ ಪಡೆಯಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಕರ್ನಾಟಕ ಉರ್ದು ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು- ಕಳುಹಿಸಿಕೊಡಬೇಕು.

ಈ ಶುಲ್ಕವು ಪ್ರವೇಶ ಶುಲ್ಕ, ಅಧ್ಯಯನ, ಪಠ್ಯ ಪುಸ್ತಕಗಳು ಹಾಗೂ ಪರೀಕ್ಷೆ ಶುಲ್ಕ ಸಹ ಒಳಗೊಂಡಿರುತ್ತದೆ. ಅರ್ಜಿಯನ್ನು ಸ್ವೀಕರಿಸಲು ಫೆಬ್ರವರಿ 28 ಕೊನೆಯ ದಿನಾಂಕವಾಗಿರುತ್ತದೆ.

ಈ ತರಬೇತಿಗೆ ಕನಿಷ್ಠ ವಿದ್ಯಾರ್ಹತೆ ಇರುವುದಿಲ್ಲ. ಅರ್ಜಿ ಹಾಗೂ ಇತರೆ ವಿವರಗಳಿಗೆ ಉರ್ದು ಅಕಾಡೆಮಿ ಗ್ರಂಥಾಲಯ, ಚಾಲುಕ್ಯ ವಿಭಾಗ, ಕನ್ನಡ ಭವನ (ರವೀಂದ್ರ ಕಲಾಕ್ಷೇತ್ರ ಹಿಂಭಾಗ) ಜೆ.ಸಿ. ರಸ್ತೆ, ಬೆಂಗಳೂರು ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸೈಯದ್ ನಿಜಾಮುದ್ದೀನ್ ದೂ. 22213167/ಮೊ. 8095482660 ನಿಶಾದ್ ಬಾನು ಮೊ. ಸಂಖ್ಯೆ 9886259438 ಮೂಲಕ ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## <u>ಮಿಲಿಟರಿ ಶಾಲೆ – 8ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆ</u>

ಬೆಂಗಳೂರು, ಫೆಬ್ರವರಿ 2, (ಕರ್ನಾಟಕ ವಾರ್ತೆ)

ಉತ್ತರಾಖಂಡ ರಾಜ್ಯದ ಡೆಹಾರಡೂನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್‌ಗೆ ಎಂಟನೇ ತರಗತಿಯ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಬೆಂಗಳೂರು ಕೇಂದ್ರದಲ್ಲಿ 2017 ರ ಜೂನ್ 1 ಮತ್ತು 2 ರಂದು ನಡೆಸಲಾಗುವುದು.

ಮಾನ್ಯತೆ ಪಡೆದಿರುವ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿರುವ ಅಥವಾ ಉತ್ತೀರ್ಣರಾಗಿರುವ ಹಾಗೂ 01-01-2018 ರಂತೆ ಹನ್ನೊಂದುವರೆ ವರ್ಷದಿಂದ 13

ವರ್ಷದೊಳಗಿರುವ (ಅಂದರೆ ದಿನಾಂಕ 02-06-2005 ರಿಂದ 01-07-2006 ರೊಳಗೆ ಜನಿಸಿರುವ) ಬಾಲಕರು ಮಾತ್ರ ಪ್ರವೇಶ ಪರೀಕ್ಷೆಗೆ ಅರ್ಹರಿರುತ್ತಾರೆ.

ಈ ಸಂಸ್ಥೆಯ ಮುಖ್ಯ ಗುರಿ ಯುವಕರನ್ನು ದೇಶದ ಸಶಸ್ತ್ರ ಪಡೆಗೆ ಸೇರಲು ಸಿದ್ಧಗೊಳಿಸುವುದು ಹಾಗೂ ಈ ನಿಟ್ಟಿನಲ್ಲಿ ಯುವಕರಿಗೆ ಸರ್ವ ರೀತಿಯ ವಿದ್ಯಾಭ್ಯಾಸ/ತರಬೇತಿ ನೀಡುವುದು. ಕಾಲೇಜಿನಲ್ಲಿ ವರ್ಷವೊಂದಕ್ಕೆ ಪ್ರಸಕ್ತ ವಿದ್ಯಾಭ್ಯಾಸ ಶುಲ್ಕ ರೂ 42,400/- ಆಗಿರುತ್ತದೆ.

ವಿವರಣ ಪತ್ರ ಹಾಗೂ ಹಳೇ ಪ್ರಶ್ನೆ ಪತ್ರಿಕೆಗಳನ್ನೊಳಗೊಂಡ ಅರ್ಜಿ ನಮೂನೆಯನ್ನು ಕೋರಿಕೆ ಪತ್ರ ಮೇರೆಗೆ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಕೆ.ಎಂ. ಕಾರ್ಯಪ್ಪ ಭವನ, ನಂ 58, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ರಸ್ತೆ, ಬೆಂಗಳೂರು - 560 025 ಇವರ ಹೆಸರಿನಲ್ಲಿ ರೂ 550/- (ಸಾಮಾನ್ಯ ಅಭ್ಯರ್ಥಿಗಳಿಗೆ) ಮತ್ತು ರೂ. 505/- (ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಿಗೆ) ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಖುದ್ದಾಗಿ ಪಡೆಯಬಹುದಾಗಿದೆ.

ರಿಜಿಸ್ಟರ್ಡ್ ಪಾರ್ಸಲ್ ಮೂಲಕ ಅರ್ಜಿ ನಮೂನೆಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಮೇಲೆ ತಿಳಿಸಿದ ಬ್ಯಾಂಕ್ ಡ್ರಾಫ್ಟ್‌ನೊಂದಿಗೆ 11"*9" ಅಳತೆ ಸೈಜಿನ ಸ್ವವಿಳಾಸದ ಲಕೋಟೆಯ ಮೇಲೆ ರೂ 40/- ಮೌಲ್ಯದ ಅಂಚೆ ಚೀಟಿ ಲಗತ್ತಿಸಿ ಕಳುಹಿಸತಕ್ಕದ್ದು. ಲಕೋಟೆಯ ಅಭ್ಯರ್ಥಿಯ ಪೂರ್ಣ ಅಂಚೆ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.

ಭರ್ತಿಮಾಡಿದ ಅರ್ಜಿಯನ್ನು ದ್ವಿ ಪ್ರತಿಯಲ್ಲಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಇವರಿಗೆ ಮಾರ್ಚ್ 31 ರೊಳಗಾಗಿ ಕಳುಹಿಸಿಕೊಡಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080 - 25589459 ಅಥವಾ ಸಮೀಪದಲ್ಲಿರುವ ತಮ್ಮ ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ಬೆಂಗಳೂರಿನಲ್ಲಿ ಆ್ಯಪಲ್ ಇನ್‌ಕಾರ್ಪೋರೇಟೆಡ್ ಸಂಸ್ಥೆ ಸ್ಥಾಪನೆ - ಸಚಿವರ ಸ್ವಾಗತ

ಬೆಂಗಳೂರು, ಫೆಬ್ರವರಿ 2 , (ಕರ್ನಾಟಕ ವಾರ್ತೆ)

ಆ್ಯಪಲ್ ಇನ್‌ಕಾರ್ಪೋರೇಟೆಡ್ ಸಂಸ್ಥೆಯು ಕರ್ನಾಟಕದಲ್ಲಿ ತನ್ನ ಉತ್ಪನ್ನಗಳ ತಯಾರಿಕಾ ಘಟಕವನ್ನು ಮೊದಲ ಹಂತದಲ್ಲಿ ಪ್ರಾರಂಭಿಸುವ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರವು ಸ್ವಾಗತಿಸುತ್ತದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಆ್ಯಪಲ್ ಸಂಸ್ಥೆಯ ತನ್ನ ಉತ್ಪನ್ನಗಳ ತಯಾರಿಕಾ ಘಟಕವನ್ನು ರಾಜ್ಯದಲ್ಲಿ ಪ್ರಾರಂಭಿಸುವುದರಿಂದ ತಂತ್ರಜ್ಞಾನದ ಉತ್ಕೃಷ್ಠ ಪರಿಸರ ನಿರ್ಮಾಣ ಮತ್ತು ಪೂರೈಕೆಯ ಸರಪಳಿ ಅಭಿವೃದ್ಧಿಯಾಗುವುದಷ್ಟೇ ಅಲ್ಲದೇ, ಭಾರತ ದೇಶವು ಜಗತ್ತಿನಾದ್ಯಂತ ಹೆಚ್ಚಿನ ಪೈಪೋಟಿಯನ್ನು ನೀಡಲು ಸಮರ್ಥವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಆ್ಯಪಲ್ ಇನ್‌ಕಾರ್ಪೋರೇಟೆಡ್ ಸಂಸ್ಥೆಯು ಬೆಂಗಳೂರಿನಲ್ಲಿ ಪ್ರಾರಂಭಿಕ ಉತ್ಪಾದನೆ ಬಗ್ಗೆ ಹಾಗೂ ರಾಜ್ಯದ ಇತರ ಸ್ಥಳಗಳಲ್ಲಿ ಸರ್ಕಾರದ ಸಹಯೋಗದಿಂದ ಉತ್ಪಾದಿಸುವ ಬಗ್ಗೆ ಹಾಗೂ ಈ ಕಾರ್ಯಚರಣೆಯ ಆಗುಹೋಗುಗಳ ಕುರಿತು ಸಚಿವರೊಂದಿಗೆ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಆ್ಯಪಲ್ ಇನ್‌ಕಾರ್ಪೋರೇಟೆಡ್ ಸಂಸ್ಥೆಯ ಪ್ರತಿನಿಧಿಗಳಾದ ಪ್ರಿಯಾ ಬಾಲಸುಬ್ರಮಣ್ಯಂ (ಐಫೋನ್ ಕಾರ್ಯಚರಣೆ ಉಪಾಧ್ಯಕ್ಷೆ) ಅಲಿ ಖಾನಾಫರ್ (ಮುಖ್ಯಸ್ಥರು ಸರ್ಕಾರಗಳ ವ್ಯವಹಾರ). ಧೀರಜ್ ಚಗ್ (ನಿರ್ದೇಶಕರು, ಐಫೋನ್ ಕಾರ್ಯಾಚರಣೆ) ಮತ್ತು ಪ್ರೀಯೇಶ್ ಪೂವಣ್ಣ (ಕಂಟ್ರಿ ಕೌನ್ಸಿಲ್)ಅವರುಗಳು ಪೂರಕ ಚರ್ಚೆ ನಡೆಸಿ ರಾಜ್ಯದೊಂದಿಗೆ ಸಹ ಕಾರ್ಯ ನಡೆಸಲು ಸಹಮತಿಸಿರುತ್ತಾರೆ.

ಆ್ಯಪಲ್ ಸಂಸ್ಥೆ ಈ ನಿರ್ಧಾರದಿಂದ ಬೆಂಗಳೂರಿನ ಘನತೆ ವೃದ್ಧಿಸುವುದರೊಂದಿಗೆ ವಿದೇಶಿ ಹೂಡಿಕೆದಾರರಿಗೆ ಅತ್ಯಂತ ಆಧ್ಯತಾ ತಾಣವೆನಿಸಿಕೊಳ್ಳುತ್ತದೆ. ಇದು ಕರ್ನಾಟಕ ಸರ್ಕಾರದ ಉದ್ಯಮ, ನವೀನತೆ ಮತ್ತು ಹೂಡಿಕೆ ನೀತಿಗಳು ಹೂಡಿಕೆದಾರರಿಗೆ ಪೂರಕವಾಗಿ ಉತ್ಪಾದನಾ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಹಾಗೂ ಯವುದೇ ಹೊಸ ಯೋಜನೆಗಳು ಪ್ರಾರಂಭಿಸಲು ಉತ್ತೇಜನ ನೀಡಲು ಸರ್ಕಾರವು ಕಟಿಬದ್ಧವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಎಸ್‌ಎಂ:ಜೆಡಿ:ಜಿಪಿಆರ್.**

## Minister Priyank Kharge Welcomes

## Apple Inc's proposal to commence initial manufacturing operations in Karnataka:

Bengaluru, February 02 (Karnataka Information)

Minister of State for tourism Priyank Kharge welcomed Apple Inc's proposal to commence initial manufacturing operations in Karnataka.

Apple's intensions to manufacture in Bengaluru will foster cutting edge technology eco system and supply chain development in the State, which are critical for India to compete globally he said in a press release.

Apple's representatives led by Ms. Priya Balasubramaniam, VP iPhone operations, Mr. Alikhanafer (Head, Government affairs), Mr. Dheeraj Chugh (Director, I phone operations) and Mr Priyesh Povannal (Country Counsel) met with Ministers and officials of Government of Karnataka and had positive discussions about the initiatives in manufacturing and possible collaborations with State Government with State Government in other areas. Apples decision on initial manufacturing in Bengaluru as the most preferred destination for foreign investment and further validation of the State Governments Policies aimed at fostering manufacturing, innovation and investments in Karnataka, he said.

The Government of Karnataka is committed to new initiatives in any sector for manufacturing and will provide a conducive environment for investment said Mr. Kharge.

sm/jd/gpr

## ಆನ್‌ಲೈನ್ ಮೂಲಕ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ

ಬೆಂಗಳೂರು, ಫೆಬ್ರವರಿ 2, (ಕರ್ನಾಟಕ ವಾರ್ತೆ)

**ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನವನ್ನು ಡಿಸೆಂಬರ್ 2016 ರಿಂದ ಜಾರಿಗೆ ಬರುವಂತೆ ಪ್ರತಿ ಲೀಟರ್ ಹಾಲಿಗೆ ರೂ. 4/- ರಿಂದ 5/- ಗಳಿಗೆ ಹೆಚ್ಚಿಸಿ ಸರ್ಕಾರ ಆದೇಶಿಸಿದೆ.**

ಇನ್ನು ಮುಂದೆ ಎಲ್ಲಾ ಹಾಲು ಪೂರೈಕೆದಾರರಿಗೆ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ಖಾತೆಗೆ ನೇರ ಹಣ ವರ್ಗಾವಣೆ (ಡಿಬಿಟಿ) ಮುಖಾಂತರ ನೀಡಲು ಉದ್ದೇಶಿಸಿರುತ್ತದೆ.

ಆದ್ದರಿಂದ, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯ ಜೋಡಣೆ ಅನುಕೂಲಕರವಾಗಿದ್ದು, ಈ ಬಗ್ಗೆ ಎಲ್ಲಾ 14 ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಹಾಲು ಪೂರೈಕೆದಾರರ ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಿದ ಸಂಪೂರ್ಣ ವಿವರವನ್ನು ಸಲ್ಲಿಸಲು ಸೂಚಿಸಿದ್ದು, ಈ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತದಲ್ಲಿದೆ.

ಇನ್ನು ಮುಂದೆ ಹಾಲು ಪ್ರೋತ್ಸಾಹಧನವು ಆಧಾರ್ ಸಂಖ್ಯೆ ಜೋಡಣೆ ಹೊಂದಿರುವ ಖಾತೆಗಳಿಗೆ ಮಾತ್ರ ಜಮೆಯಾಗುತ್ತದೆ. ಆಧಾರ್ ಸಂಖ್ಯೆ ಜೋಡಣೆ ಇಲ್ಲದಿರುವ ಹಾಲು ಪೂರೈಕೆದಾರರ ಖಾತೆಗಳಿಗೆ ಈ ಪ್ರಕ್ರಿಯೆ ಆದ ನಂತರವೇ ಪ್ರೋತ್ಸಾದಧನ ಪಾವತಿಯಾಗುವುದೆಂದು ತಿಳಿಸಲಾಗಿದೆ.

ಆದ್ದರಿಂದ ಆಧಾರ್ ಕಾರ್ಡ್ ಇಲ್ಲದಿರುವ ಎಲ್ಲಾ ಹಾಲು ಉತ್ಪಾದಕರು ಆದಷ್ಟು ಬೇಗನೆ ಆಧಾರ್ ಕಾರ್ಡ್ ಪಡೆದು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಸಲ್ಲಿಸಲು ಪಶುಸಂಗೋಪನಾ ಇಲಾಖೆ ಪ್ರಕಟಣೆ ತಿಳಿಸಿದೆ.

ಸುಮಾರು 8.61 ಲಕ್ಷ ಫಲಾನುಭವಿಗಳಿಗೆ 2016–17 ನೇ ಸಾಲಿನ ಆಯವ್ಯಯ (ಬಜೆಟ್) ದಲ್ಲಿ ರೂ. 928.97 ಕೋಟಿ ನಿಗದಿಪಡಿಸಲಾಗಿದೆ. ಜುಲೈ 2016 ರ ಅಂತ್ಯಕ್ಕೆ ರೂ. 405.52 ಕೋಟಿಗಳನ್ನು ಹಾಲು ಪೂರೈಕೆದಾರರಿಗೆ ಪಾವತಿಸಿದ್ದು, ಸದರಿ ಪ್ರೋತ್ಸಾಹಧನ ಫಲಾನುಭವಿಗಳ ಖಾತೆಗೆ ಜಮೆಯಾಗುತ್ತಿದೆ.

ಎಸ್‌ಎಂ/ಜೆಡಿ/ಕೆಎಂ